ಎಂದು ಅವರು ನನ್ನ ಹೆಸರು ಹಿಡಿದು ಹೇಳಿದರು. ಬಹಳ ಕಾಲದ ನಂತರ ಅವರು ನನ್ನ ಹೆಸರು ಹಿಡಿದು ಕರೆಯುತ್ತಿರುವುದು.

ನನಗೂ ಸಂಕಟವಾಯಿತು.

'ನೀವು ಹೋಗಿ ಮಾವ. ನಾಳೆ ಶನಿವಾರ ನಾನು ಬಂದು ಸಂಬಳದ ಬಟವಾಡೆಗೆ ಏನಾದರೂ ವ್ಯವಸ್ಥೆ ಮಾಡುತ್ತೇನೆ'.

'ಹೌದಾ, ನಿಜವಾ' ಎಂದು ಅವರು ಕಣ್ಣಲ್ಲೇ ಕೇಳುತ್ತಿದ್ದರು.

'ನಿಜ, ಹೊರಡಿ' ಎಂದು ನಾನೇ ಕೈಚಾಚಿ ಕಾರಿನ ಬಾಗಿಲು ತೆರೆದೆ.

ಕಾಮ್ರೇಡ್ ಆಲಿ ರೈಟರು ರಸ್ತೆ ದಾಟ ಶ್ರೀರಾಮ ಬಸ್ಸು ಉಗುಳುತ್ತಿದ್ದ ಹೊಗೆಯೊಳಕ್ಕೆ ಹೊಕ್ಕು ಬಸ್ಸಿನೊಳಗೆ ಮರೆಯಾದರು.

* * *

ಕಾಮ್ರೇಡ್ ಆಲಿ ರೈಟರು ದೂರದಿಂದ ಮಾವನಾಗಬೇಕಾಗಿದ್ದರೂ ಅವರು ಎಲ್ಲರಿಗೂ ಗೊತ್ತಿದ್ದುದು ಮಿದುಳೊಳಗೆ ಒಂದು ಕೋಳಿಮರಿಯ ಕೂಗನ್ನು ಕೇಳಿಸಿಕೊಂಡು ಆ ಕೂಗನ್ನು ತಲೆಯೊಳಗಿಂದ ಕಿತ್ತು ಬಿಸಾಕಲು ಒದ್ದಾಡುತ್ತಿದ್ದ ಕೋಳಿ ಆಲಿ ಎಂದೇ. ನಮ್ಮ ಊರಿನ ಜವುಳಿ ಸಾಹುಕಾರರ ಮೂವರು ಮಕ್ಕಳಲ್ಲಿ ದೊಡ್ಡವನಾಗಿದ್ದ ಆಲಿ ತನ್ನ ತಲೆಯೊಳಗೆ ಕೋಳಿ ಮರಿಯೊಂದು ಹೊಕ್ಕು ಅದರ ಕುಂಯಿಗುಡುವ ಸದ್ದು ತನ್ನ ಜೀವ ತಿನ್ನುತ್ತದೆಂದು ಎರಡೂ ಕಿವಿಗಳನ್ನು ಹಸ್ತದಿಂದ ಒತ್ತಿಹಿಡಿದು ಹಗಲೂ ಇರುಳು ಒಂಟಿಯಾಗಿ ಓಡುತ್ತಿದ್ದುದನ್ನು ಬಾಲಕನಾಗಿದ್ದ ನಾನು ದೂರದಿಂದಲೇ ಕಂಡು ಗಾಬರಿಗೊಳ್ಳುತ್ತಿದ್ದೆ. ಜವಳಿ ಸಾಹುಕಾರರು ಮಗನ ಹುಚ್ಚು ಸಂಕಟವನ್ನು ಕೊನೆಗೊಳಿಸಲು ಆತನನ್ನು ಕನ್ನಡ ಶಾಲೆ ಬಿಡಿಸಿ ಉಳ್ಳಾಲದ ಅರಬಿ ಮದರಸಕ್ಕೆ ಕುರಾನು ಕಲಿಸಲು ಸೇರಿಸಿದ್ದರು. ಅಲ್ಲಿ ಸೇರಿದ ಮೇಲೆ ಆಲಿಯ ಮಿದುಳೊಳಗೆ ಕೋಳಿ ಕೂಗುವುದು ನಿಂತುಹೋದರೂ ಆತ ಅಲ್ಲಿನ ಉಸ್ತಾದರೊಬ್ಬರ ಕಿವಿಯನ್ನು ಕಚ್ಚಿ ಗಾಯಗೊಳಿಸಿ ಊರಿಗೆ ಮರಳಿ ಶಾಲೆ ಓದುವುದನ್ನು ಮುಂದುವರಿಸಿದ್ದನು. ಶಾಲೆ ಓದಿ ಮುಗಿಸಿ ಸುಳ್ಯದ ಕಾಲೇಜಿಗೆ ಓದಲು ಹೋದ ಆಲಿ ಮಾವ ಮಂಗಳೂರಿಗೆ ಕಾನೂನು ಕಲಿಯಲು ಸೇರಿ ಅಲ್ಲಿ ಕೇರಳದ ಸಹಪಾಠಿಗಳ ಸಂಗದಲ್ಲಿ ಕಮ್ಯೂನಿಷ್ಟನಾಗಿ ವಾಪಾಸು ಬಂದಿದ್ದರು. ಹಾಗೆ ಬಂದವರು ತಂದೆಯ ಜವಳಿ ಅಂಗಡಿಯಲ್ಲಿ ಕುಳಿತು ಹೈಸ್ಕೂಲು ಓದುತ್ತಿದ್ದ ಪಡ್ಡೆ ಹುಡುಗರಾದ ನಮಗೆ ಕ್ರಾಂತಿಯ ಪಾಠವನ್ನು ಕಲಿಸಲು ಹೆಣಗುತ್ತಿದ್ದರು.

'ಲಾಲ್ ಸಲಾಂ' ಹೇಳಿದರೆ ಮರಳಿ 'ಲಾಲ್ ಸಲಾಂ' ಹೇಳಬೇಕು ಎಂದು ಅವರು ನಮ್ಮ ಕಂಕುಳೊಳಕ್ಕೆ ಕೈಹಾಕಿ ಜೀವಹೋಗುತ್ತಿದ್ದ ಹಾಗೆ ಜಿಗುಟುತ್ತಿದ್ದುದು ಈ ಕಾಲದಲ್ಲಿಯೇ.

ಸಣ್ಣಪುಟ್ಟ ಪುಡಿಗವಿತೆಗಳನ್ನು ಬರೆಯುತ್ತಿದ್ದ ನನ್ನನ್ನು ಅವರು ಹಿಡಿದು ಕೂರಿಸಿ ಕ್ರಾಂತಿಯ ಕವಿತೆಗಳನ್ನು ಹೇಗೆ ಬರೆಯಬೇಕೆಂದು ಜೀವಹೋಗುವ ಹಾಗೆ ಕಿವಿ ಹಿಂಡಿ ಕಲಿಸುತ್ತಿದ್ದುದೂ ಈ ಕಾಲದಲ್ಲೇ. ಕ್ರಾಂತಿಯ ಕವಿತೆಗಳನ್ನು ಬರೆದರೆ ಮಾತ್ರ ಸಾಲದು, ಅವುಗಳನ್ನು ಕೆಂಪುಶಾಯಿಯಲ್ಲೇ ಬರೆಯಬೇಕು ಎಂದು ಅವರು ತಾಕೀತು ಮಾಡಿದ್ದರು. ನನ್ನ ಲೆಕ್ಕ, ಸಮಾಜ ವಿಜ್ಞಾನ, ಗಣಿತದ ನೋಟು ಬುಕ್ಕಿನ ತುಂಬ ಈ ಕೆಂಪು ಶಾಯಿಯ ಕವಿತೆಗಳನ್ನು ಗೀಚಿರುವುದು ನೋಡಿದ ಹೈಸ್ಕೂಲಿನ ಮೇಷ್ಟ್ರುಗಳು ಶಾಲೆಯಲ್ಲಿ ಜೀವಹೋಗುವ ಹಾಗೆ ನನ್ನ ಕಿವಿಯನ್ನು ಹಿಂಡಿ ಒಂಟಿಕಾಲಿನ ಮೇಲೆ ಗೋಡೆಗೆ ಮುಖತಿರುಗಿಸಿ ನಿಲ್ಲಿಸುತ್ತಿದ್ದರು. ನನ್ನ ಶಾಲೆಯ ಆ ದಿನಗಳು ನರಕಕ್ಕಿಂತ ಘೋರವಾಗಿ ನಾನು ಶಾಲೆಗೆ ಹೋಗುವುದು ನಿಲ್ಲಿಸಿ ನದಿಗೆ ಮೀನು ಹಿಡಿಯಲು ಹೋಗುವ ಪೋಲಿ ಹುಡುಗರ ಜೊತೆ ಸೇರಿ ಆರಾಮವಾಗಿ ಹಗಲು ಕಳೆಯುತ್ತಿದ್ದೆ. ಕತ್ತಲಾಗುವಾಗ ಆಲಿ ಮಾವನ ಕಣ್ಣು ತಪ್ಪಿಸಿ ಮನೆ ಸೇರಿಕೊಳ್ಳುತ್ತಿದ್ದೆ.

ಅಷ್ಟು ಹೊತ್ತಿಗೆ ದೇಶದಲ್ಲಿ ತುರ್ತು ಪರಿಸ್ಥಿತಿ ಸಂಭವಿಸಿ ಆಲಿಮಾವನವರು ಊರು ಬಿಟ್ಟು ಮಾಯವಾಗಿದ್ದರು. ಅವರು ಮಾಯವಾದ ಸ್ವಲ್ಪ ದಿನದಲ್ಲೇ ಖಾಕಿ ಚಡ್ಡಿ ಹಾಕಿದ್ದ ಕೇರಳದ ಪೊಲೀಸರು ಅವರನ್ನು ಹುಡುಕಿಕೊಂಡು ನಮ್ಮ ಊರಿನವರೆಗೂ ಬಂದಿದ್ದರು. ಕೇರಳದ ಕಾಡಿನಲ್ಲಿ ಪೊಲೀಸರು ಆಲಿಯವರನ್ನು ಸುಟ್ಟುಹಾಕಿದ್ದಾರೆಂದೂ ಸುದ್ದಿಯಾಗಿತ್ತು.

ಅದಾದ ಮೇಲೆ ಅವರ ಸುದ್ದಿಯೇ ಇರಲಿಲ್ಲ.

ತುರ್ತು ಪರಿಸ್ಥಿತಿ ಮುಗಿದು, ಇಂದಿರಾಗಾಂಧಿಯೂ ತೀರಿಹೋಗಿ, ಬಾಬರಿ ಮಸೀದಿಯ ಧ್ವಂಸವಾದ ಹೊತ್ತಲ್ಲಿ ಆಲಿಯವರು ಊರಿನಲ್ಲಿ